ಒಎಸ್ ಸಂ.ಃ 175/2013
ಪಿಡಬ್ಲ್ಯೂ ಃ 2 (ತೇಜಸ್ವಿನಿ)
ದಿನಾಂಕ 01-03-2019 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ- ಶ್ರೀ ಕೆಆರ್‌ಆರ್ ವಕೀಲರಿಂದ

ನಾನು ದಿನಾಂಕ 27.04.1993 ರಂದು ಹುಟ್ಟಿರುತ್ತೇನೆ. ಈಗ ನನಗೆ ಸುಮಾರು 25 ವರ್ಷ ವಯಸ್ಸಾಗಿರುತ್ತದೆ. 25 ವರ್ಷಗಳ ಹಿಂದೆ ಮುನಿಯಪ್ಪರವರ ಕುಟುಂಬ ಮತ್ತು ಅವರ ಮಕ್ಕಳ ನಡುವೆ ಏನೆಲ್ಲಾ ವ್ಯವಹಾರ ನಡೆದಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ದಾವಾ ಆಸ್ತಿಗಳನ್ನು ಮುನಿಯಪ್ಪ ಸಂಪಾದನೆ ಮಾಡಿರುತ್ತಾರೆ. ದಾವಾ ಆಸ್ತಿಗಳು ಈಗಲೂ ಕೂಡ ಮುನಿಯಪ್ಪರವರ ಹೆಸರಿನಲ್ಲೇ ಇರುತ್ತವೆ. ಮುನಿಯಪ್ಪರವರ ಮಕ್ಕಳ ಮಧ್ಯೆ ಕ್ರಯಪತ್ರ, ವಿಲ್‌ನಾಮೆ ಆಗಿರುವ ವಿಚಾರ ನನಗೆ ಗೊತ್ತಿರುವುದಿಲ್ಲ. ಈ ವಿಚಾರದ ಬಗ್ಗೆ ನನಗೆ ನಮ್ಮ ತಂದೆ ತಾಯಿ ಹೇಳಿರುತ್ತಾರೆ. ದಾವಾ ಐಟಂ ನಂ.1 7ನೇ ಪ್ರತಿವಾದಿಯ ಸ್ವಾಧೀನದಲ್ಲಿದೆ. ಮುನಿಸ್ವಾಮಿಯವರಿಗೆ ಆ ಆಸ್ತಿಗೆ ಹೇಗೆ ಬಂತು ಎಂದು ಹೇಳಲು ಸಾಧ್ಯವಿಲ್ಲ. ಚಿಕ್ಕವೆಂಕಟಪ್ಪ ಮತ್ತು ಮುನಿಸ್ವಾಮಿಯವರು ಅಣ್ಣ ತಮ್ಮಂದಿರು ಅಂದರೆ ಚಿಕ್ಕಪ್ಪ ದೊಡ್ಡಪ್ಪನ ಮಕ್ಕಳು. ಮುನಿಸ್ವಾಮಿ ವೆಂಕಟಪ್ಪನ ಮಗ ಎಂದರೆ ನನಗೆ ಗೊತ್ತಿರುವುದಿಲ್ಲ. ವೆಂಕಟಪ್ಪ ಪಾಪಣ್ಣನವರ ಮಗ ಎಂದರೆ ನನಗೆ ಗೊತ್ತಿರುವುದಿಲ್ಲ.

ಪಾಪಣ್ಣ ಅಲಿಯಾಸ್ ಮುನಿಯಪ್ಪ, ಚಂಗಲರಾಯಪ್ಪ, ಪೆದ್ದಪ್ಪಯ್ಯ, ಮುನಿವೆಂಕಟಪ್ಪ ಅಲಿಯಾಸ್ ಕಿಚ್ಚಪ್ಪ, ವೆಂಕಟಪ್ಪ ಇವರೆಲ್ಲಾ ಒಂದೇ ಕುಟುಂಬದಲ್ಲಿ ಇದ್ದಾರೆ. ಒಂದೇ ಕುಟುಂಬದಲ್ಲಿ ವಾಸವಾಗಿರುವ ಬಗ್ಗೆ ರೇಷನ್ ಕಾರ್ಡ್ ಇದೆ ಸಾಕ್ಷಿ ಮುಂದುವರೆ ಬೇರೆ ಬೇರೆ ರೇಷನ್ ಕಾರ್ಡ್ ಇರುತ್ತವೆ ಎಂದು ಹೇಳುತ್ತಾರೆ. ಈಗ ಎಷ್ಟು ವರ್ಷಗಳಿಂದ ರೇಷನ್ ಕಾರ್ಡ್ ಮತ್ತು ಓಟರ್ ಲಿಸ್ಟ್ ಬೇರೆ ಬೇರೆ ಇರುತ್ತವೆ ಎಂದು ನನಗೆ ಗೊತ್ತಿರುವುದಿಲ್ಲ. ಸುಮಾರು 25-30 ವರ್ಷಗಳಿಂದ ಬೇರೆ ಬೇರೆಯಾಗಿ ಇದ್ದಾರೆ. ಆ ಬಗ್ಗೆ ದಾಖಲೆಗಳು ಇರುವುದಿಲ್ಲ. ದಾವಾ ಆಸ್ತಿಯಲ್ಲಿ ವಾದಿಯವರಿಗಾಗಲೀ, ಪ್ರತಿವಾದಿ 17 ಮತ್ತು 18ರವರಿಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಆ ಆಸ್ತಿಗಳು ಅವರ ಕುಟುಂಬಕ್ಕೆ ಸೇರಿದ ಆಸ್ತಿಗಳಲ್ಲ ಎಂದರೆ ಸರಿಯಲ್ಲ.

ಪ್ರತಿವಾದಿ-7, 9 ರಿಂದ 11 ಮತ್ತು 19 ರವರು ಏನು ತಕರಾರು ಹಾಕಿದ್ದಾರೆ ಎಂದು ನನಗೆ ಗೊತ್ತಿರುವುದಿಲ್ಲ ವಕೀಲರ ಮೂಲಕ ಕೇಳಿ ತಿಳಿದುಕೊಂಡಿರುತ್ತೇನೆ. ಚಿಕ್ಕವೆಂಕಟಪ್ಪ ಕಡೆಯಿಂದ

ಮುನಿಸ್ವಾಮಿ ಐಟಂ ನಂ.1 ಆಸ್ತಿಯನ್ನು ಅಕ್ರಮಿಸಿಕೊಂಡಿರುತ್ತಾರೆ. ಎಲ್ಲಾ ಆಸ್ತಿಗಳು ಪ್ರತಿವಾದಿ 1 ರಿಂದ 16, 19 ರಿಂದ 24 ರವರ ಕುಟುಂಬಕ್ಕೆ ಸೇರಿದ ಆಸ್ತಿಗಳು ಎಂದರೆ ಸರಿಯಲ್ಲ. ಆ ಪಾಲು ವಿಭಾಗದಿಂದ ನಮಗಾಗಲೀ ಪ್ರತಿವಾದಿ 17 ಮತ್ತು 18 ರವರಿಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಐಟಂ ನಂ.1ನ್ನು ದಿನಾಂಕ 12.12.1967 ರಂದು ಚಂಗಲರಾಯಪ್ಪ ಆಸ್ತಿಯನ್ನು ಆತನ ಮಗನಾದ ಚಿಕ್ಕವೆಂಕಟಪ್ಪ ವೆಂಕಟಪ್ಪನಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಐಟಂ ನಂ.5 ವಾದಿ ಮತ್ತು ಪ್ರತಿವಾದಿಯರಿಗೆ ಸೇರಿದ ಸ್ವತ್ತು ಅಲ್ಲ ಎಂದರೆ ಸರಿಯಲ್ಲ. ಆ ಆಸ್ತಿಯು ಮುನಿಯಪ್ಪ ಬಿನ್ ಚಿಕ್ಕಮುನಿಸ್ವಾಮಿ ಇವರಿಗೆ ಸೇರಿದ ಆಸ್ತಿ ಎಂದರೆ ಸರಿಯಲ್ಲ.

ಐಟಂ ನಂ.6ನ್ನು ಚಂಗಲರಾಯಪ್ಪನಿಗೆ ಬಂದಿದ್ದು ಆ ಆಸ್ತಿಯಲ್ಲಿ ಪ್ರತಿವಾದಿ 17 ಮತ್ತು 18 ರವರು ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ಐಟಂ ನಂ.7 ಪಟೇಲ್ ತಿಪ್ಪಣ್ಣನವರಿಗೆ ಸೇರಿದ ಆಸ್ತಿಯಾಗಿದ್ದು ನಮಗೆ ಸಂಬಂಧಪಟ್ಟಿದ್ದಲ್ಲ ಎಂದರೆ ಸರಿಯಲ್ಲ. ಐಟಂ ನಂ.8ನ್ನು ಚಿಕ್ಕವೆಂಕಟಪ್ಪ ದಿನಾಂಕ 04.04.1969 ರಲ್ಲಿ ಚಿನ್ನಪ್ಪರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅದೇ ಆಸ್ತಿಯನ್ನು ಚಿನ್ನಪ್ಪ ಇವರು ಪ್ರತಿವಾದಿ 19 ರವರ ಗಂಡ ವೆಂಕಟಪ್ಪರವರಿಗೆ ದಿನಾಂಕ 04.01.1997 ರಂದು ಮಾಡಿದ್ದು ಅವರು ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ಐಟಂ ನಂ.9 ಬಯಣ್ಣ ಬಿನ್ ರಾಮಣ್ಣ ಇವರಿಗೆ ಸೇರಿದ್ದು ವಾದಿ ಮತ್ತು ಪ್ರತಿವಾದಿಯರಿಗೆ ಸೇರಿದ ಸ್ವತ್ತು ಅಲ್ಲ ಎಂದರೆ ಸರಿಯಲ್ಲ. ಐಟಂ ನಂ.10 ನ್ನು ಚಂಗಲರಾಯಪ್ಪ ಮತ್ತು ಚಿಕ್ಕವೆಂಕಟಪ್ಪ ಇಬ್ಬರೂ ಸೇರಿ ದಿನಾಂಕ 30.11.1967 ರಂದು 7ನೇ ಪ್ರತಿವಾದಿಗೆ ಕ್ರಯಪತ್ರ ಮಾಡಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಆ ಆಸ್ತಿಯು ಅವರ ಸ್ವಾಧೀನದಲ್ಲಿದ್ದು ವಾದಿ ಮತ್ತು ಪ್ರತಿವಾದಿಯರಿಗೆ ಸೇರಿದ ಸ್ವತ್ತು ಅಲ್ಲ ಎಂದರೆ ಸರಿಯಲ್ಲ.

ಐಟಂ ನಂ.11 27 ಪ್ರತಿವಾದಿಗೆ ಸೇರಿದ ಆಸ್ತಿಯಾಗಿದ್ದು ವಾದಿ ಮತ್ತು ಪ್ರತಿವಾದಿಯರಿಗೆ ಸೇರಿದ ಸ್ವತ್ತು ಅಲ್ಲ ಎಂದರೆ ಸರಿಯಲ್ಲ. ನಾವಾಗಲೀ, ಪ್ರತಿವಾದಿ 17 ಮತ್ತು 18 ರವರು ಉಳಿದ ಪ್ರತಿವಾದಿಯರ ಕುಟುಂಬಕ್ಕೆ ಸಂಬಂಧಪಟ್ಟವರಲ್ಲ ಎಂದರೆ ಸರಿಯಲ್ಲ. ನಮಗೆ ದಾವಾ ಆಸ್ತಿಗಳಲ್ಲಿ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. 1945 ರಿಂದ ನಾವು ಪ್ರತಿವಾದಿ 1 ರಿಂದ 16, 19 ರಿಂದ 24 ರವರೊಂದಿಗೆ ನಾವು ಯಾವತ್ತೂ ವಾಸವಾಗಿಲ್ಲ ಎಂದರೆ ಸರಿಯಲ್ಲ ಅದರ ಬಗ್ಗೆ ಯಾವುದೇ ದಾಖಲೆಗಳು ಇಲ್ಲ ಎಂದರೆ ಸರಿಯಲ್ಲ. ದಿನಾಂಕ 28.11.1965 ರಂದು ಆದ ವಿಭಾಗ

ಪತ್ರದಂತೆ ಚಂಗಲರಾಯಪ್ಪ ಅವರ ಮಗ ಚಿಕ್ಕವೆಂಕಟಪ್ಪ ಮತ್ತು ಉಳಿದವರು ಮಾರಾಟ ಮಾಡಿದಂತಹ ಆಸ್ತಿಗಳಲ್ಲಿ ನಮಗಾಗಲೀ ಪ್ರತಿವಾದಿ 17 ಮತ್ತು 18ರವರಿಗಾಗಲೀ ಯಾವುದೇ ಸಂಬಂಧ ಇಲ್ಲ ಮತ್ತು ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

ನಾವು ವಂಶವೃಕ್ಷವನ್ನು ಊಹಿಸಿಕೊಂಡು ಮುನಿಯಪ್ಪ ನಮ್ಮ ತಾತ ಎಂದು ದಾವಾ ಆಸ್ತಿಯಲ್ಲಿ ನಮಗೂ ಪಾಲು ಇದೆ ಎಂದು ಮುನಿಯಪ್ಪನ ಹೆಸರಿನಲ್ಲಿದ್ದ ಆಸ್ತಿಗಳನ್ನು ಹಾಜರು ಪಡಿಸಿ ಪಾಲು ಇದೆ ಎಂದು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ದಾವಾ ಆಸ್ತಿಗಳ ಬಗ್ಗೆ ಯಾವುದೇ ಹಕ್ಕು ಇಲ್ಲದೇ ಇದ್ದರೂ ಕೂಡ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರು ಎಲ್ಲೆಲ್ಲಿ ವಾಸವಾಗಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಸರ್ವೆ ನಂಬರ್‌ಗಳಲ್ಲಿ ಯಾರೆಲ್ಲಾ ಸ್ವಾಧೀನದಲ್ಲಿದ್ದಾರೆ ಎಂದು ನನಗೆ ಗೊತ್ತಿರುವುದಿಲ್ಲ.

ನಮ್ಮ ಆಸ್ತಿ ನಮಗೆ ಕೊಡದೇ ಇರುವುದಕ್ಕೆ ನಾವು ಈ ಕೇಸು ಹಾಕಿರುತ್ತೇವೆ. ಸುಮಾರು 10 ವರ್ಷಗಳ ಹಿಂದೆ ನಾವು ಭಾಗ ಕೇಳಿರುತ್ತೇವೆ. ನಾವು ಭಾಗ ಕೇಳಿದ ಬಗ್ಗೆ ನೋಟೀಸು ಕೊಟ್ಟಿರುವುದಿಲ್ಲ. ದೊಡ್ಡ ಮನುಷ್ಯರ ಮುಂದೆ ನಾವು ನ್ಯಾಯ ಪಂಚಾಯಿತಿ ಮಾಡಿರುವುದಿಲ್ಲ. ನಾವು ಭಾಗ ಕೇಳಿದ ಬಗ್ಗೆ ದಾಖಲೆಗಳು ಇರುವುದಿಲ್ಲ. ನಾವು 10 ವರ್ಷಗಳ ಹಿಂದೆ ಭಾಗ ಕೇಳಿರುವುದಿಲ್ಲ ಎಂದರೆ ಸರಿಯಲ್ಲ. ನಾವು ದಾವಾ ಆಸ್ತಿಯ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ನಮಗೆ ಯಾವುದೇ ಹಕ್ಕು ಇಲ್ಲದೇ ಇದ್ದರೂ ಕೂಡ ನಾವು ಸುಳ್ಳು ಕೇಸು ಹಾಕಿದ್ದೇವೆ ಎಂದರೆ ಸರಿಯಲ್ಲ. ನಮಗೆ ದಾವಾ ಆಸ್ತಿಯಲ್ಲಿ ಅರ್ಧ ಭಾಗವಾಗಲೀ ಅಥವಾ ಯಾವುದೇ ಭಾಗವಾಗಲೀ ಇರುವುದಿಲ್ಲ ಎಂದರೆ ಸರಿಯಲ್ಲ.

ನಿ ಪಿ 1 ರಿಂದ 7 ರ ಪಹಣಿಗಳಲ್ಲಿರುವ ಮುನಿಯಪ್ಪ ನಮ್ಮ ತಾತ ಅಲ್ಲ ಎಂದರೆ ಸರಿಯಲ್ಲ. ನಿ ಪಿ 8 ರಲ್ಲಿರುವಂತಹ ತಿಪ್ಪಣ್ಣ, ವೆಂಕಟಪ್ಪ, ಚಿನ್ನಕ್ಕ, ಸುಬ್ರಮಣಿ, ಚಿನ್ನಪ್ಪ ಇವರು ನಮ್ಮ ಕುಟುಂದವರು ಅಲ್ಲ ಎಂದರೆ ಸರಿಯಲ್ಲ. ನಿ ಪಿ 9 ಮತ್ತು 10 ರಲ್ಲಿರುವಂತಹ ಎಂ.ವಿ ಕಂಡಪ್ಪ ಬಿನ್ ಮಾದಪ್ಪ ಇವರು ಯಾರು ಎಂದು ನನಗೆ ಗೊತ್ತಿರುವುದಿಲ್ಲ. ನಿ ಪಿ 11 ರಲ್ಲಿರುವಂತಹ ಬಯಣ್ಣ ನಮ್ಮ ಕುಟುಂಬಕ್ಕೆ ಸಂಬಂಧಿಸಿದವರಲ್ಲ. ನಿ ಪಿ 15 ರಿಂದ 17 ರಲ್ಲಿರುವ ಪಾಪಣ್ಣ ನಮ್ಮ ತಾತ ಅಲ್ಲ ಎಂದರೆ ಸರಿಯಲ್ಲ. ನಿ ಪಿ 19 ಮತ್ತು 20 ಬೇಡರ

ಮುನಿಯಪ್ಪ ನಮ್ಮ ತಾತ ಅಲ್ಲ ಎಂದರೆ ಸರಿಯಲ್ಲ. ನಿ ಪಿ 23 ರಿಂದ 28 ರಲ್ಲಿರುವಂತಹ ಆಸ್ತಿಯು ನಮ್ಮ ಕುಟುಂಬಕ್ಕೆ ಸಂಬಂಧಿಸಿದ್ದಲ್ಲ ಎಂದರೆ ಸರಿಯಲ್ಲ. ಬೇಡರ ಮುನಿಯಪ್ಪ ನಮ್ಮ ತಾತ ಎಂದು ತೋರಿಸಲು ದಾಖಲೆಗಳನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಮ್ಮ ತಾಯಿ ಆರೋಗ್ಯವಾಗಿದ್ದು ಅವರಿಗೆ ಕುಟುಂಬದ ವಿಚಾರ ಎಲ್ಲಾ ಗೊತ್ತಿತ್ತು ಅವರು ಬಂದಲ್ಲಿ ನಿಜ ಸಂಗತಿ ಹೊರ ಬರುತ್ತದೆ ಎಂದು ನಾನು ಅವರಿಂದ ಅಧಿಕಾರ ಪತ್ರ ಪಡೆದುಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪ್ರತಿವಾದಿ 25 ರಿಂದ 27 ರವರ ಪರ ವಕೀಲರು ಕಾಲಾವಕಾಶ ಕೋರಿದ್ದು ವಿನಂತಿಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿ. ಇದೆ

(ಸುಜಾತ ಸುವರ್ಣ.ಬಿ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮುಳಬಾಗಿಲು.